ನಬಾರ್ಡ್‌ನಿಂದ ಇದುವರೆವಿಗೂ ಪಡೆದಿರುವ ಸಾಲ

617 (387) ಶ್ರೀ ಬಿ.ಎಸ್.ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) 1996-97, 97-98 ಹಾಗೂ 98-99ರಲ್ಲಿ ನಬಾರ್ಡ್‌ನಿಂದ ರಾಜ್ಯಕ್ಕೆ ಯಾವ ಯಾವ ಉದ್ದೇಶಗಳಿಗಾಗಿ ಎಷ್ಟು ಎಷ್ಟು ಸಾಲವನ್ನು ಪಡೆಯಲಾಗಿದೆ ?

ಆ) ನಬಾರ್ಡ್‌ನಿಂದ ಇದುವರೆವಿಗೂ ಪಡೆದಿರುವ ಸಾಲವೆಷ್ಟು ? (ಅಸಲು ಮತ್ತು ಬಡ್ಡಿ ಪ್ರತ್ಯೇಕವಾಗಿ ವಿವರ ನೀಡುವುದು).

ಇ) ಆ ಬಗ್ಗೆ ಇದುವರೆವಿಗೂ ಎಷ್ಟು ಹಣವನ್ನು ಹಿಂತಿರುಗಿಸಲಾಗಿದೆ ? (ವರ್ಷವಾರು ವಿವರ ನೀಡುವುದು).

ಈ) ಇನ್ನು ಎಷ್ಟು ಹಣವನ್ನು ಹಿಂತಿರುಗಿಸ ಬೇಕಾಗಿದೆ ? (ಅಸಲು ಮತ್ತು ಬಡ್ಡಿಯ ಪ್ರತ್ಯೇಕ ವಿವರ ನೀಡುವುದು).

ಉ) ಈ ಹಣವನ್ನು ಹಿಂತಿರುಗಿಸಲು ಸರ್ಕಾರದ ರೂಪುರೇಖೆಗಳೇನು ? (ವಿವರ ನೀಡುವುದು)

ಶ್ರೀ ಉಮೇಶ್.ವಿ.ಕತ್ತಿ (ಲೋಕೋಪಯೋಗಿ ಸಚಿವರು)

ಅ) 96-97, 97-98 ಮತ್ತು 98-99ರಲ್ಲಿ ನಬಾರ್ಡ್ ನೆರವಿನಡಿಯಲ್ಲಿ ಗ್ರಾಮೀಣ ರಸ್ತೆ ಅಭಿವೃದ್ಧಿ ಮತ್ತು ಸೇತುವೆ ನಿರ್ಮಾಣಕ್ಕಾಗಿ ಲೋಕೋಪಯೋಗಿ ಇಲಾಖೆ ಅಡಿಯಲ್ಲಿ ಪಡೆದಿರುವ ಸಾಲದ ವಿವರ ಕೆಳಕಂಡಂತೆ ಇದೆ.

ವರ್ಷ	ಅಂದಾಜು ಮೊತ್ತ (ಕೋಟಿ ರೂ.ಗಳಲ್ಲಿ)	ಸಾಲ ಸಹಾಯ
96-97	133.00	122.00
97-98	157.20	138.00
98-99 (ಈವರೆಗೆ)	22.61	20.36

ಆ) ನಬಾರ್ಡ್‌ನಿಂದ ಇದುವರೆವಿಗೂ ಒಟ್ಟು 280.00 ಕೋಟಿ ರೂ.ಗಳ ಸಾಲ ಸಹಾಯವು ಶೇ. 12ರ ಬಡ್ಡಿ ದರದಲ್ಲಿ ಈವರೆಗೆ 73.00 ಕೋಟಿ ರೂ.ಗಳ ಸಾಲ ಪಡೆಯಲಾಗಿದೆ.

ಇ) ನಬಾರ್ಡ್‌ನಿಂದ ಪಡೆದಿರುವ ಸಾಲವನ್ನು ಸಾಲ ಮರು ಪಾವತಿಪಡೆದ ಮೂರು ವರ್ಷಗಳ ನಂತರದ 3 ವರ್ಷಗಳಲ್ಲಿ ಸಮನಾಗಿ ಪಾವತಿಸಬೇಕಿದ್ದು, ಸಾಲ ಪಡೆದ 3 ವರ್ಷಗಳವರೆಗೆ ಶೇ. 12 ರಂತೆ 3 ತಿಂಗಳಿಗೊಮ್ಮೆ ಬಡ್ಡಿ ನೀಡಬೇಕಿದೆ.

ಈ) ಮೇಲೆ ತಿಳಿಸಿರುವ ಹಿನ್ನೆಲೆಯಲ್ಲಿ ಉದ್ಭವಿಸುವುದಿಲ್ಲ.

ಉ) ಮೇಲೆ ತಿಳಿಸಿರುವ ನಬಾರ್ಡ್ ಷರತ್ತಿನಂತೆ ಸಾಲ ಪಾವತಿಸಲು ಕ್ರಮ ಕೈಗೊಳ್ಳಲಾಗುವುದು.